


# ಹುಲಿಯ ಘರ್ಜನೆ ಅಳಿದಲ್ಲಿ ಶುರುವಾಯ್ತು ನೆನಪುಗಳ ಮಳೆ

ದಿನಾಲು ಬೆಳಗೆದ್ದು ಮುಖ ತೊಳೆದವಳೇ ನೀರು ಕುಡಿಯುವ ಮುನ್ನವೇ ಬಂದು ನನ್ನನ್ನು ಮೂರು ಸುತ್ತು ಹಾಕಿ, 'ದೇವರೇ ಇವತ್ತನ್ನು ಸುಖವಾಗಿಡು' ಎಂದು ಬೇಡಿಕೊಂಡು ಮುಂದಿನ ಕೆಲಸಕ್ಕೆ ಹೋಗುತ್ತಿದ್ದ ತುಂಗಾ ಅವತ್ತು, 'ದೇವರೇ ಎಂದೆಂದೂ ನೀನು ನನ್ನ ಕೈಬಿಟ್ಟಿಲ್ಲ, ಇವತ್ತು ಹೊಸಮನೆಗೆ ಪಾಯದ ಪೂಜೆ ಮಾಡುತ್ತಿದ್ದೇವೆ, ಯಾವುದೇ ವಿಘ್ನ ಬರದಂತೆ ಕಾಪಾಡು' ಎಂದು ಬೇಡಿಕೊಂಡಳು.

ಯಾವಾಗ ನನ್ನ ಪಕ್ಕದ ಕಾಲುದಾರಿಯಲ್ಲಿ ಕಾಳಿಂಗನ ಎತ್ತಿನ ಗಾಡಿ ಕಾಡಿಗೂ ನಾಡಿಗೂ ಓಡಾಡಲಾರಂಭಿಸಿತೋ ಆಗಿನಿಂದ ಅಲ್ಲೊಂದು ಗಾಡಿ ಜಾಡಾಯಿತು. ದಾರಿಗೆ ಅಡ್ಡಬರುತ್ತಿದ್ದ ಸಣ್ಣಪುಟ್ಟ ಮರಗಳನ್ನು ಕಡಿದು ನಗರದಿಂದ ನನ್ನವರೆಗೂ, ನನ್ನಿಂದ ಮುಂದೆ ಒಂದೆರಡು ಮೈಲಿ ದಪ್ಪನೇ ಮರಮುಟ್ಟು ಸಿಕ್ಕುವವರೆಗೂ ಎತ್ತಿನ ಗಾಡಿ ಓಡಾಡುತ್ತಿತ್ತು. ಅಲ್ಲಿಂದಾಚೆಗೆ ಕಾಲುದಾರಿ ಹಾಗೆಯೇ ಇದ್ದು, ಮುಂದಕ್ಕೆ ಹೋಗಿಬರುವ ಪ್ರಮೇಯ ಅಷ್ಟಾಗಿ ಬಂದಿರಲಿಲ್ಲ.

ನೆಟ್ಟ ನೇರ ಮರಗಳನ್ನು ಕಡಿದು ತಂದು ವಿಸ್ತರಿಸಿದ ಹಿತ್ತಲಿನಲ್ಲಿ ಶೇಖರಿಸಿ ಚೆನ್ನಾಗಿ ಒಣಗಿಸಿದರು. ಕೆಲವು ಒಣಗಿ ಸೊಟ್ಟಪಟ್ಟವಾಗುವಂತಿದ್ದ ಮರಗಳಿಗೆ ಭಾರ ಹೇರಿ ಬೆಂಡಾಗದಂತೆ ನೋಡಿಕೊಂಡರು. ಅಷ್ಟಾದರೆ ಸಾಲದಲ್ಲ, ಮರಮುಟ್ಟುಗಳಿಗೊಂದು ಆಕಾರ ಅಲಂಕಾರ ಬೇಕಲ್ಲ ಎಂದು ನುರಿತ ಬಡಗಿಯರನ್ನು ಎಲ್ಲೆಲ್ಲಿಂದಲೋ ಹುಡುಕಿ ಕರೆತಂದ. ಸುಮಾರು ಏಳೆಂಟು ತಿಂಗಳು ಅವರು ಅವುಗಳಿಗೊಂದು ರೂಪವನ್ನು ಕೊಟ್ಟು, ಅಟ್ಟಕ್ಕೆಲ್ಲ ಮರದ ಮುಟ್ಟುಗಳನ್ನು ಹಾಕಿ ಉಪ್ಪರಿಗೆ ಮನೆ ಕಟ್ಟಿದರು. ಚೀಲಗಳಲ್ಲಿ ಧಾನ್ಯ ತುಂಬಿಡಲು ಬೇರೆ, ಪಣತಕ್ಕೆ ಬೇರೆ ಎಂದು ಜಾಗಗಳನ್ನು ಗುರುತುಪಡಿಸಿದರು.

ಹೀಗಿರುವಾಗ ಒಂದು ದಿನ ಮಧ್ಯರಾತ್ರಿ, ಮನೆಯ ಪಕ್ಕದಿಂದಲೇ ಹುಲಿಯ ಗರ್ಜನೆ ಕೇಳಿಬಂತು. ಚಿರತೆ, ಸೀಳುನಾಯಿಗಳು ಆಗಾಗ್ಗೆ ದನಕರುಗಳ ಮೇಲೆ ಆಕ್ರಮಣ ಮಾಡುತ್ತಿದ್ದುದು ಸಹಜವಾಗಿದ್ದರೂ, ಕಾಳಿಂಗ ಇಲ್ಲಿ ವಾಸಿಸಲಾರಂಭಿಸಿದಾಗಿನಿಂದಲೂ, ಹುಲಿಯೆಂಬುದು ಹೀಗೆ ಮಧ್ಯಕಾಡಿನಿಂದ ಕಾಡಿನಂಚಿನವರೆಗೆ ಬಂದಿರಲಿಲ್ಲ.

ಮನೆಮಂದಿಯೆಲ್ಲ ದಢಕ್ಕನೆದ್ದರು. ಹೊರಗಡೆ ಹುಲಿಯಂತೇ ಬೆಳೆದಿದ್ದ ಕಾಳನೂ ಮೊದಮೊದಲು ಬೊಗಳಿದರೂ ಆಮೇಲೆ ಕುಯ್ಯ ಕುಯ್ಯ ಎಂದು ಬಾಲ ಮುದುರಿಕೊಂಡದ್ದು ಅದರ ಸದ್ದಿನಿಂದಲೇ ಗೊತ್ತಾಗುತ್ತಿತ್ತು. ಮನೆ ಕೆಲಸ ಪೂರ್ಣ ಮುಗಿದಿರದಿದ್ದರಿಂದ ಇನ್ನೂ ಹೊಸ ಮನೆಗೆ ಬಂದಿರಲಿಲ್ಲ. ಆದರೆ ಕೆಲಸ ಮಾಡುತ್ತಿದ್ದವರು ಅಲ್ಲೇ ಮಲಗಿದ್ದರು. ಮುಂಬಾಗಿಲ ಕೆತ್ತನೆ ಇನ್ನೂ ಮುಗಿದಿರಲಿಲ್ಲವಾದ್ದರಿಂದ ಬಾಗಿಲು ಸಹ ಕೂರಿಸಿರದೆ ತೆರೆದೇಯಿತ್ತು.

ಬಾಗಿಲು ತೆರೆದು ಆಚೆ ಬರಲು ಭಯ… ಎಲ್ಲರೂ ತಲೆಗೊಂದೊಂದು ಬಡಿಗೆ, ದೊಣ್ಣೆ, ಮಚ್ಚು, ಕೊಡಲಿ ಹೀಗೆ ಕೈಗೆ ಏನೇನು ಸಿಕ್ಕಿತೋ ಅದನ್ನೆಲ್ಲ ಹಿಡಿದುಕೊಂಡು, ನೆಲಕ್ಕೆ, ಸಿಕ್ಕ ಸಿಕ್ಕ ಮರಗಳಿಗೆ, ತೊಲೆಗೆ ಬಡಿಯುತ್ತ ಹಾಹಾಕಾರ ಎಬ್ಬಿಸಿದರು. ಕೆಲಸದವರೂ ಆ ಮನೆ ಕಡೆಯಿಂದ ಕಿರುಚಲಾರಂಭಿಸಿದರು. ದನಕರುಗಳಂತೂ ಅಂಬಾ ಅಂಬಾ ಎಂದು ಜೀವಭಯದಿಂದ ಹಾಕರಿಯಲಾರಂಭಿಸಿದ್ದವು. ಕರುಗಳಂತೂ ಗಾಬರಿಯಿಂದ ಕಣ್ಣೆ ಕಿತ್ತುಕೊಳ್ಳಲು ಹೋಗಿ ನುಣುಚಾಡಿ ಉಸಿರುಗಟ್ಟಿದಂತೆ ಗೋಮಾಳೆಯಿಂದ ಅರಚಲಾರಂಭಿಸಿದ್ದವು. ಅಂದರೆ ಹುಲಿ ಕೊಟ್ಟಿಗೆಯ ದನಗಳನ್ನು ಕಂಡೇ ತಿನ್ನಲು ಬಂದಿರುವುದು ಎಂಬುದು ಖಾತ್ರಿಯಾಯಿತು. ಈಗಾಗಲೇ ಕಟ್ಟಿಹಾಕಿರುವ ಯಾವುದಾದರೊಂದನ್ನು ಆಪೋಷಣೆ ತೆಗೆದುಕೊಂಡಿರುವುದರಲ್ಲಿ ಅನುಮಾನವೇ ಇಲ್ಲ ಅನ್ನಿಸಿ ಇನ್ನಷ್ಟು ಆರ್ಭಟ ಜಾಸ್ತಿ ಮಾಡಿದರು.

ಆ ಆರ್ಭಟಕ್ಕೆ ಹುಲಿರಾಯನಂಥ ಹುಲಿರಾಯನೇ ಗಾಬರಿ ಬಿದ್ದು, ಬಂದು ನನ್ನ ಬುಡದಲ್ಲಿದ್ದ ಕಟ್ಟೆಯನ್ನೇರಿ ಕುಳಿತು ಪರಿಸ್ಥಿತಿಯನ್ನು ಅವಲೋಕಿಸಲಾರಂಭಿಸಿದ್ದ. ಆಗಲೇ ಹಿಂದಿನ ದಿನ ಬೇಟೆಯಾಡಿದ್ದ ಜಿಂಕೆಯೊಂದರ ಅಳಿದುಳಿದಿದ್ದ ಭಾಗವನ್ನು ತಿಂದು ಬಂದಿದ್ದರಿಂದ ಅದಕ್ಕೆ ಇನ್ನೊಂದು ಬೇಟೆಯ ಅಗತ್ಯವಿರಲಿಲ್ಲ. ಆದರೆ ಅದು ಈ ಜನಗಳಿಗೆ ತಿಳಿಯುವುದಾದರೂ ಹೇಗೆ? ಕೊಳ್ಳಿಯೊಂದಕ್ಕೆ ಬಟ್ಟೆ ಸುತ್ತಿಕೊಂಡು ಅದಕ್ಕೆ ಹರಳೆಣ್ಣೆಯನ್ನು ಹಾಕಿ ಕಂದೀಲಿನಂತೆ ಮಾಡಿಕೊಂಡು ಈಚೆ ಬಂದು ಓಡಿಸಲು ಕಾಳಿಂಗ ಮನಸ್ಸು ಮಾಡಿದ್ದರೂ ಮಡದಿ, ಮಕ್ಕಳು ಆಚೆಗೆ ಬರಲು ಬಿಡಲಿಲ್ಲ. ಇಂಥ ಎಷ್ಟು ಹುಲಿಗಳನ್ನು ತಾನು ಕಂಡಿಲ್ಲ ಎಂದು ಆತ ಥೊಳ್ಳೆಗಳು ನಡುಗುತ್ತಿದ್ದರೂ ಮನೆಯವರಿಗೆ

